ಈ) 1997-98ನೇ ಸಾಲಿಗೆ ಮೇಲಿನ ಯೋಜನೆಯಡಿ ಇನ್ನೂ ಹೆಚ್ಚಿನ ಮಕ್ಕಳನ್ನು ತರಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಕೇಂದ್ರ ಯೋಜನೆಯಡಿ - 3701781 ಮಕ್ಕಳು

ರಾಜ್ಯ ಯೋಜನೆಯಡಿ - 1013710 ಮಕ್ಕಳು

ಆ) ಕೇಂದ್ರ ಯೋಜನೆಯಡಿ - 245913 ಮಕ್ಕಳು

ರಾಜ್ಯ ಯೋಜನೆಯಡಿ - 50164 ಮಕ್ಕಳು

ಇ) ಆದರೆ ಬಳ್ಳಾರಿ ಜಿಲ್ಲೆಗೆ 73773.9 ಕ್ವಿಂಟಾಲ್ ಅಕ್ಕಿಯನ್ನು ಕೇಂದ್ರ ಸರ್ಕಾರವು ಒದಗಿಸಿದೆ. ರಾಜ್ಯ ಸರ್ಕಾರವು ತನ್ನ ನಿಧಿಯಿಂದಲೇ ರೂ. 5,53,304.00 ಗಳನ್ನು ಸಾಗಾಣಿಕೆ ಮತ್ತು ಆಡಳಿತಾತ್ಮಕ ವೆಚ್ಚಕ್ಕಾಗಿ ಬಳ್ಳಾರಿ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಈ) ಹೌದು.

ಅರಣ್ಯ ರಕ್ಷಣೆ ಮತ್ತು ಬೆಳೆಸಲು ಕೈಗೊಂಡಿರುವ ಯೋಜನೆ.

306 (622) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):

ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಅರಣ್ಯ ರಕ್ಷಣೆ ಮತ್ತು ಅರಣ್ಯ ಬೆಳೆಸಲು ಇರುವ ಸಾರ್ವಜನಿಕ ಸಹಭಾಗಿತ್ವ ಜಂಟೀ ಅರಣ್ಯ ಸಮಿತಿಗಳನ್ನು ಮಾಡುವ ಬಗ್ಗೆ ಇಲಾಖೆಗೆ ನಿಗದಿಪಡಿಸಿದ ಗುರಿಯೇನು;

ಆ) ಇದುವರೆಗೆ ಎಷ್ಟು ಜಂಟಿ ಅರಣ್ಯ ಸಮಿತಿಗಳನ್ನು ಮಾಡಲಾಗಿದೆ, ಜಿಲ್ಲಾವಾರು ಮಾಹಿತಿ ನೀಡುವುದು;

ಇ) ಈ ಯೋಜನೆಯಲ್ಲಿ ಎಷ್ಟು ವಿಸ್ತೀರ್ಣದ ನೆಡುತೋಪುಗಳನ್ನು ಮಾಡುವ ಗುರಿ ಹಾಕಿಕೊಳ್ಳಲಾಗಿತ್ತು ಇದಕ್ಕಾಗಿ ನಿಗದಿಪಡಿಸಿದ ಹಣವೆಷ್ಟು (ಸಾಧನೆಯ ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರು

ಅ) ಜಂಟಿ ಅರಣ್ಯ ಮತ್ತು ನಿರ್ವಹಣೆಯು ಒಂದು ಹೊಸ ವಿಚಾರವಾಗಿದ್ದು ಇದು ಗುರಿ ಆಧಾರಿತ ಯೋಜನೆಯಾಗಿರುವುದಿಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಯೋಜನೆ ಬಗ್ಗೆ ಗ್ರಾಮಸ್ಥರಿಗೆ ತಿಳುವಳಿಕೆ ನೀಡಿ ಅರಣ್ಯದ ಅಭಿವೃದ್ಧಿ ಸಂರಕ್ಷಣೆ ಕಾರ್ಯದಲ್ಲಿ ಗ್ರಾಮಸ್ಥರ ಹೊಣೆಗಾರಿಕೆಯ ಅರಿವನ್ನು ಮೂಡಿಸಿ ಈವರೆಗೆ 925 ಗ್ರಾಮ ಅರಣ್ಯ ಸಮಿತಿಯನ್ನು ರಚಿಸಲಾಗಿದೆ.

ಆ) ರಾಜ್ಯದಲ್ಲಿ ಇದುವರೆಗೆ 925 ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದೆ. ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.

1) ಬೆಂಗಳೂರು ಗ್ರಾ.ಜಿಲ್ಲೆ	-	006
2) ಚಿಕ್ಕಮಗಳೂರು	-	016
3) ಉತ್ತರ ಕನ್ನಡ	-	221
4) ದಕ್ಷಿಣ ಕನ್ನಡ	-	103
5) ಹಾಸನ	-	002
6) ಬೀದರ್	-	034
7) ಬಿಜಾಪುರ	-	012
8) ಕೋಲಾರ	-	002
9) ಬೆಳಗಾಂ	-	129
10) ಮೈಸೂರು	-	039
11) ಮಂಡ್ಯ	-	016
12) ಗುಲ್ಬರ್ಗಾ	-	061
13) ರಾಯಚೂರು	-	018
14) ಶಿವಮೊಗ್ಗ	-	047
15) ತುಮಕೂರು	-	081
16) ಚಿತ್ರದುರ್ಗ	-	016
17) ಧಾರವಾಡ	-	088
18) ಬಳ್ಳಾರಿ	-	008
19) ಕೊಡಗು	-	026
ಒಟ್ಟು		925

೩) ಈ ಯೋಜನೆಯು ಗುರಿ ಆಧಾರಿತವಾಗಿರುವುದಿಲ್ಲ. ಪಶ್ಚಿಮಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಯಡಯಲ್ಲಿ ಅರಣ್ಯೀಕರಣ ಕಾರ್ಯ ಕ್ರಮ ಅನುಷ್ಠಾನಗೊಳ್ಳುತ್ತಿರುವ ಕೆನರಾ ವೃತ್ತ ಸಿರ್ಸಿ:ಹಾಗೂ ಶಿವಮೊಗ್ಗ ವೃತ್ತದಲ್ಲಿ ಈವರೆಗೆ 6965 ಹೆಕ್ಟೇರ್ ಪ್ರದೇಶದಲ್ಲಿ ನಡುತೋಪುಗಳನ್ನು ಗ್ರಾಮ ಅರಣ್ಯ ಸಮಿತಿಯ ಸಹಕಾರದೊಂದಿಗೆ ಬೆಳೆಸಲಾಗಿದೆ. ಇದಕ್ಕಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ ರೂ. 6.96 ಕೋಟಿಗಳನ್ನು ಖರ್ಚು ಮಾಡಲಾಗಿದೆ.